(ಅ) ಇಲ್ಲ.

(ಇ) ಉದ್ಭವಿಸುವುದಿಲ್ಲ.

(ಈ) ಇದುವರೆಗೆ ಖಾಸಗಿ ಸಂಸ್ಥೆಗಳಿಂದ ತರಬೇತಿ ಕೊಡಲು ಬೇಡಿಕೆ ಬಂದಿರುವುದಿಲ್ಲ.

ಪೊಲೀಸ್ ಇಲಾಖೆಯಲ್ಲಿ ವಾರದ ರಜೆ ಮತ್ತು ಭತ್ಯೆಯ ಬಗ್ಗೆ

1804 (2566) ಶ್ರೀ ಗುರುಸ್ವಾಮಿ. ಎ.ಎಸ್. (ಚಾಮುಂಡೇಶ್ವರಿ):

ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಪೊಲೀಸ್ ಇಲಾಖೆಯಲ್ಲಿ ವಾರದ ರಜೆ ಭತ್ಯೆಯನ್ನು ಯಾವ ಯಾವ ದರ್ಜೆಯ ಅಧಿಕಾರಿಗಳಿಗೆ ನೀಡಲಾಗುತ್ತಿದೆ;

(ಆ) ನೀಡಲಾಗುತ್ತಿರುವ ರಜಾ ಭತ್ಯೆ ಎಷ್ಟು;

(ಇ) ಹಾಲಿ ನೀಡಲಾಗುತ್ತಿರುವ ಸಂಭಾವನೆಯನ್ನು ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಇನ್ನೂ ಹೆಚ್ಚಿಸದಿರುಲು ಕಾರಣವೇನು?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗೃಹ ಸಚಿವರು)

(ಅ) ಪೊಲೀಸ್ ಪೇದೆ ಮತ್ತು ಮುಖ್ಯಪೇದೆಗಳಿಗೆ ವಾರದ ರಜಾ ಭತ್ಯೆಯನ್ನು ನೀಡಲಾಗುತ್ತಿದೆ.

(ಆ) ಕರ್ತವ್ಯ ನಿರ್ವಸುವ ಪ್ರತಿ ವಾರದ ರಜಾ ದಿನಕ್ಕೆ ರೂ. 30.00ಗಳ ಭತ್ಯೆ ನೀಡಲಾಗುತ್ತಿದೆ.

(ಇ) ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಬೈಂದೂರು ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳವರ ಕಾಲೋನಿಗಳಿಗೆ ದಾರಿ ದೀಪ.

1805 (2527) ಶ್ರೀ ಗೋಪಾಲ ಪೂಜಾರಿ. ಕೆ. (ಬೈಂದೂರು):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಉಡುಪಿ ಜಿಲ್ಲೆಯಲ್ಲಿ ಬೈಂದೂರು ವಿಧಾನ ಸಭಾ ಕ್ಷೇತ್ರಕ್ಕೆ 1998-99 1999-2000ದ ಇಸವಿಯಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳವರ ಕಾಲೋನಿಗಳಿಗೆ ದಾರಿದೀಪ ಒದಗಿಸಲಾಗಿದೆಯೇ;

(ಆ) ಈ ಬಗ್ಗೆ ಒಟ್ಟು ಬಂದಿರುವ ಅರ್ಜಿಗಳೆಷ್ಟು; ಎಷ್ಟು ಉಳಿದಿರುವ ಅರ್ಜಿಗಳೆಷ್ಟು;

(ಇ) ಈ ಅವಶ್ಯಕತೆಗಳನ್ನು ಕೂಡಲೇ ಪೂರೈಸುವ ಬಗ್ಗೆ ಸರ್ಕಾರ ಯಾವ ರೀತಿ ಕಾರ್ಯಕ್ರಮ ಹಮ್ಮಿಕೊಂಡಿದೆ?